ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 162 (ಹೊಸ ಸಂಖ್ಯೆ: 214) ಗಿರಿನಗರ, ಬೆಂಗಳೂರು.

## ಡಿಸೆಂಬರ್ 2022 : ವಾರ್ಡ್ ಸಮಿತಿಯ 1ನೇ ಸಭೆಯ ನಡವಳಿಗಳು

***********

ಉಲ್ಲೇಖ : ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020-21. ದಿನಾಂಕ: 22-09-2021.

******

ದಿನಾಂಕ : 03-12-2022

ಸ್ಥಳ : ವಾರ್ಡ್ ಕಛೇರಿ, ಸ್ವಾಮಿ ವಿವೇಕಾನಂದ ಉದ್ಯಾನವನ, ಗಿರಿನಗರ

ಸಮಯ : ಪೂರ್ವಾಹ್ನ 11.00 ಗಂಟೆಗೆ

***********

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಸುನಿಲ್‌ಕುಮಾರ್.ಪಿ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ ರಮೇಶ್ .ಎಂ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್-214, ಗಿರಿನಗರ |
| 3 | ಶ್ರೀಮತಿ ಕುಮುದ | ಕಿರಿಯ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 4 | ಶ್ರೀ ಲಕ್ಷ್ಮಿನಾರಾಯಣ | ಕಂದಾಯ ಮೌಲ್ಯ ಮಾಪಕರು |
| 5 | ಶ್ರೀ ಸಿ. ಶ್ರೀನಿವಾಸ್. | ಕಂದಾಯ ವಸೂಲಿಗಾರರು |
| 6 | ಶ್ರೀ ಸಿ. ಸತೀಶ್ | ಸೂಪರ್‌ವೈಸರ್, ವಾರ್ಡ್-214 |
| 8 | ಹೆಚ್.ಆರ್. ಆನಂದ ಕೃಷ್ಣ | ಸಾರ್ವಜನಿಕರು |
| 9 | ಶ್ರೀ ಮುರಳಿ ಮೂರ್ತಿ | ಸಾರ್ವಜನಿಕರು |
| 10 | ಎಸ್. ಕೃಷ್ಣ ಮೂರ್ತಿ | ಸಾರ್ವಜನಿಕರು |
| 11 | ಶ್ರೀ ಪ್ರಸಾದ್ | ಸಾರ್ವಜನಿಕರು |
| 12 | ಶ್ರೀ ಪ್ರಸನ್ನ | ಸಾರ್ವಜನಿಕರು |
| 13 | ಶ್ರೀ ಎಲ್. ಜೀವನ್ | ಸಾರ್ವಜನಿಕರು |
| 14 | ಶ್ರೀ ರವಿ.ಬಿ | ಸಾರ್ವಜನಿಕರು |

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯವರ ಅನುಮತಿಯೊಂದಿಗೆ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಹಾಜರಿದ್ದ ಸದಸ್ಯರೆಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಿಂದಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಹಾಗೂ ಕೈಗೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ವಾರ್ಡ್ ಅಭಿಯಂತರರು ವರದಿಯನ್ನು ಓದಿ ತಿಳಿಸಿದರು.

1. ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಪಾಲಿಕೆ ವತಿಯಿಂದ ಕೈಗೊಳ್ಳುವ ಕಾಮಗಾರಿಗಳಿಗೆ ನಾಮಫಲಕಗಳನ್ನು ಅಳವಡಿಸಲು ಅಧ್ಯಕ್ಷರು ತಿಳಿಸಿದರು.

2. ಹೊಸಕೆರೆಹಳ್ಳಿ ರಸ್ತೆಯಲ್ಲಿ ಕರ್ನಾಟಕ ಬ್ಯಾಂಕ್ ಎದುರು ಪಾದಚಾರಿ ಮಾರ್ಗದಲ್ಲಿರುವ ಡೆಬ್ರಿಸ್‌ನ್ನು ತೆರವುಗೊಳಿಸಲು ವಾರ್ಡ್ ಅಭಿಯಂತರರಿಗೆ ಅಧ್ಯಕ್ಷರು ತಿಳಿಸಿದರು.

3. ವಾರ್ಡ್ ವ್ಯಾಪ್ತಿಯ ಬಿ.ಎಸ್.ಕೆ 3ನೇ ಹಂತ, 6ನೇ ಬ್ಲಾಕ್, 3ನೇ ಮುಖ್ಯರಸ್ತೆಯಲ್ಲಿನ ಮತದಾರರ ಪಟ್ಟಿಯನ್ನು ಪರಿಶೀಲಿಸಲು ಸಭೆಯಲ್ಲಿ ಹಾಜರಿದ್ದ ಕಂದಾಯ ಮೌಲ್ಯ ಮಾಪಕರಿಗೆ ಅಧ್ಯಕ್ಷರು ತಿಳಿಸಿದರು.

4. ಶ್ರೀವಿದ್ಯಾನಗರ 1ನೇ ಅಡ್ಡರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಒಳಚರಂಡಿ ಕೊಳವೆ ಬದಲಾಯಿಸಲು ಅಗೆದಿರುವ ರಸ್ತೆಯ ಭಾಗವನ್ನು ಸರಿಯಾದ ರೀತಿಯಲ್ಲಿ ದುರಸ್ಥಿ ಕಾಮಗಾರಿ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರಿಗೆಅಧ್ಯಕ್ಷರು ತಿಳಿಸಿದರು.

5. ಎಸ್.ಬಿ.ಎಂ ಕಾಲೋನಿ 2ನೇ ಮುಖ್ಯರಸ್ತೆ, ಪೋಸ್ಟ್ ಆಫೀಸ್ ಬಳಿ ನೀರಿನ ಪೈಪು ಹೊಡೆದು ಹೋಗಿದ್ದು, ಸೋರುತ್ತಿರುವ ನೀರಿನ ಕೊಳವೆಯನ್ನು ಕೂಡಲೇ ದುರಸ್ಥಿಗೊಳಿಸಬೇಕೆಂದು ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರಿಗೆಅಧ್ಯಕ್ಷರು ತಿಳಿಸಿದರು.

6. ಗಿರಿನಗರ 2ನೇ ಫೇಸ್, 11ನೇ ಅಡ್ಡರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಒಳಚರಂಡಿ ಕೊಳವೆ ಬದಲಾಯಿಸಲು ಅಗೆದಿರುವ ರಸ್ತೆಯ ಭಾಗವನ್ನು ಸರಿಯಾದ ರೀತಿಯಲ್ಲಿ ದುರಸ್ಥಿ ಕಾಮಗಾರಿ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರಿಗೆ ಅಧ್ಯಕ್ಷರು ತಿಳಿಸಿದರು.

7. ಎಸ್.ಬಿ.ಎಂ ಕಾಲೋನಿ 9ನೇ ಮತ್ತು 10ನೇ ಅಡ್ಡರಸ್ತೆಯಲ್ಲಿ ಕಸ ಸಂಗ್ರಹಣಾ ಕಾರ್ಯವು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲವೆಂದು ಸಾರ್ವಜನಿಕರು ಸಭೆಯಲ್ಲಿ ದೂರು ನೀಡಿದ್ದು, ಈ ಕೂಡಲೇ ಸದರಿ ವಿಷಯದ ಬಗ್ಗೆ ಕ್ರಮವಹಿಸಬೇಕೆಂದು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಅಧ್ಯಕ್ಷರು ಸೂಚಿಸಿದರು.

8. ಶ್ರೀನಿವಾಸನಗರದ 16ನೇ ಮುಖ್ಯರಸ್ತೆ, ಕಸ ಸಂಗ್ರಹಣಾ ಕಾರ್ಯವು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲವೆಂದು ಸಾರ್ವಜನಿಕರು ಸಭೆಯಲ್ಲಿ ದೂರು ನೀಡಿದ್ದು, ಈ ಕೂಡಲೇ ಸದರಿ ವಿಷಯದ ಬಗ್ಗೆ ಕ್ರಮವಹಿಸಬೇಕೆಂದು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಅಧ್ಯಕ್ಷರು ಸೂಚಿಸಿದರು.

9. ಶ್ರೀವಿದ್ಯಾನಗರ ಬಸ್ ನಿಲ್ದಾಣದ ಹಿಂಭಾಗ ಕಸ ಸಂಗ್ರಹಣಾ ಸ್ಥಳವನ್ನು ಸ್ವಚ್ಛವಾಗಿಡಲು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಅಧ್ಯಕ್ಷರು ಸೂಚಿಸಿದರು.

10. ಗಿರಿನಗರ ವಾರ್ಡ್ ವ್ಯಾಪ್ತಿಗೆ ಸಂಬಂಧಿಸಿದಂತೆ, ಟಿ.ಆರ್. ಮಿಲ್ ಆರೋಗ್ಯ ಕೇಂದ್ರವು ಸಮಯಕ್ಕೆ ಸರಿಯಾಗಿ ತೆರೆಯುತ್ತಿಲ್ಲವೆಂದು ಸಭೆಗೆ ಹಾಜರಿದ್ದ ಸಾರ್ವಜನಿಕರು ದೂರನ್ನು ಸಲ್ಲಿಸಿರುತ್ತಾರೆ. ಈ ಕೂಡಲೇ ಸದರಿ ವಿಷಯದ ಬಗ್ಗೆ ಕ್ರಮವಹಿಸಲು ವೈದ್ಯಾಧಿಕಾರಿಗಳಿಗೆ ಸೂಚಿಸುವಂತೆ ಸಭೆಯಲ್ಲಿ ಹಾಜರಿದ್ದ ವಾರ್ಡ್ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿದರು.

11. ದಿನಾಂಕ: 09-11-2022 ರಿಂದ 08-12-2022ರವರೆಗೆ ಮನೆ ಮನೆ ಸಮೀಕ್ಷೆ ಕಾರ್ಯವು ಪ್ರಗತಿಯಲ್ಲಿದ್ದು, ಒಂದು ವೇಳೆ ಮತದಾರರ ಪಟ್ಟಿಯಲ್ಲಿ ಹೆಸರುಗಳು ಇಲ್ಲದಿದ್ದಲ್ಲಿ ಅಥವಾ ಯಾವುದೇ ತಿದ್ದುಪಡಿ ಅಗತ್ಯವಿದ್ದಲ್ಲಿ ಆನ್‌ಲೈನ್ ಮುಖೇನ ಅಥವಾ ನಿಗಧಿತ ನಮೂನೆಗಳಲ್ಲಿ ಸಂಬಂಧಪಟ್ಟ ಮತದಾರರ ನೋಂದಣಾಧಿಕಾರಿಗಳಿಗೆ

ಬಿ.ಎಲ್.ಓಗಳ ಮುಖೇನ ಸಲ್ಲಿಸಬಹುದಾಗಿದೆ ಎಂಬ ವಿಷಯವನ್ನು ವಾರ್ಡ್ ಸಮಿತಿಗೆ ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

"ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು'..

03/12/2022

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 214, ಗಿರಿನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 214, ಗಿರಿನಗರ

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎನ್. ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ವಲಯ ಆಯುಕ್ತರು ( ದಕ್ಷಿಣ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು. ಬಸವನಗುಡಿ ರವರ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು. ಬಸವನಗುಡಿ ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
8. ವಾರ್ಡ್ ಸಮಿತಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
9. ಕಛೇರಿ ಪ್ರತಿ.